

ಭಾರತದ ಅಂಗಾಂಗ ದಾನದ ದರ ಪ್ರತಿ ದಶಲಕ್ಷಕ್ಕೆ 0.65ರಷ್ಟು ಮಾತ್ರ ಇದೆ.

### ಅಂಗಾಂಗ ದಾನದ ವಿಧಗಳು

ಅಂಗಾಂಗಗಳನ್ನು ಜೀವಂತ ದಾನಿಗಳಿಂದ ಹಾಗೂ ಮೃತ ದಾನಿಗಳಿಂದ ಪಡೆಯಬಹುದು. ಜೀವಂತ ದಾನಿಗಳು ಒಂದು ಮೂತ್ರಪಿಂಡ, ಯಕೃತ್ತಿನ ಒಂದು ಭಾಗ, ಮೇದೋಜೀರಕ ಗ್ರಂಥಿ, ಕರುಳು ಮತ್ತು ಒಂದು ಕಿಡ್ನಿಯನ್ನು ದಾನ ಮಾಡಬಹುದು. ದಾನ ಮಾಡಿದ ಬಳಿಕವೂ ವ್ಯಕ್ತಿ ಆರೋಗ್ಯವಂತ ಜೀವನ ನಡೆಸಬಹುದು. ಇದನ್ನು ಸಾಮಾನ್ಯವಾಗಿ ಜೀವಂತ ದಾನಿಗಳು, ತಮ್ಮ ಸಂಗಾತಿ, ಅಪ್ಪ–ಅಮ್ಮ, ಆಪ್ತಮಿತ್ರರು, ಕುಟುಂಬ ಸದಸ್ಯರಿಗೆ ನೀಡುತ್ತಾರೆ. ಮೃತ ವ್ಯಕ್ತಿಯ ಅಂಗಾಂಗಗಳನ್ನು ದಾನ ಪಡೆಯುವುದು ಎರಡನೇ ವಿಧ. ವ್ಯಕ್ತಿಯ ಮೆದುಳು ನಿಷ್ಕ್ರಿಯಗೊಂಡರೆ ಮಾತ್ರ ಅಂಗಾಂಗಗಳನ್ನು ಪಡೆಯಬಹುದು. ಇಂತಹ ವ್ಯಕ್ತಿಯಿಂದ ಪಡೆದ ಅಂಗಗಳನ್ನು ತಜ್ಞ ಶಸ್ತ್ರಚಿಕಿತ್ಸಕರು, ಕಸಿ ಮಾಡುವ ಮೂಲಕ ಅಗತ್ಯವಿರುವವರ ದೇಹಕ್ಕೆ ಜೋಡಿಸುತ್ತಾರೆ.

# ಹೃದಯವನ್ನೂ ಮಾಡಬಹುದು ದಾನ!

**-ಡಾ. ಆರ್. ಕೇಶವ**

ಹೃದ್ರೋಗ ತಜ್ಞರು, ಫೋರ್ಟಿಸ್ ಆಸ್ಪತ್ರೆ, ಬೆಂಗಳೂರು

**ಹೃದಯ** ತೊಂದರೆಯಿಂದ ಬಳಲುವ ಹಲವು ಮಂದಿಗೆ ಬದಲಿ ಹೃದಯದ ಅಗತ್ಯವಿರುತ್ತದೆ. ಮೆದುಳು ನಿಷ್ಕ್ರಿಯವಾದರೂ ಹೃದಯ ಚೆನ್ನಾಗಿಯೇ ಕೆಲಸ ಮಾಡುತ್ತಿರುತ್ತದೆ. ಹೃದಯದ ಬಡಿತ ನಿಲ್ಲುವ ಒಳಗಾಗಿ ಅದನ್ನು ದೇಹದಿಂದ ಹೊರಗೆ ತೆಗೆಯಬೇಕಾಗುತ್ತದೆ. ಅದಾದ ಬಳಿಕವೇ ಹೃದಯ ಕಸಿ ಮಾಡುವ ಪ್ರಕ್ರಿಯೆ ಶುರುವಾಗುತ್ತದೆ. ಒಮ್ಮೆ ವ್ಯಕ್ತಿಯ ಮೆದುಳು ನಿಷ್ಕ್ರಿಯವಾದ ಬಳಿಕ ಕುಟುಂಬದ ಒಪ್ಪಿಗೆ ಪಡೆದು, ಹೃದಯವನ್ನು ಪಡೆಯುವ ಮತ್ತು ನೀಡುವ ಪ್ರಕ್ರಿಯೆ ಶುರುವಾಗುತ್ತದೆ. ಮೊದಲಿಗೆ, ಹೃದಯದ ಅವಶ್ಯಕತೆ ಇರುವ ರೋಗಿಯನ್ನು, ಸರ್ಕಾರದ ‘ಜೀವ ಸಾರ್ಥಕತೆ’ ಯೋಜನೆಯಡಿಯಲ್ಲಿ ನಡೆದ ದಾಖಲಾತಿಯ ಮೂಲಕ ಗುರುತಿಸಿ ಅವರ ಕುಟುಂಬವನ್ನು ಸಂಪರ್ಕಿಸಲಾಗುತ್ತದೆ. ಅದಾದ ಬಳಿಕ, ಹೃದಯ ಕಸಿ ತಜ್ಞರು ದಾನಿಯಿಂದ ಪಡೆದ ಹೃದಯ ಜೋಡಿಸುವ ಕೆಲಸ ಆರಂಭಿಸುತ್ತಾರೆ.

‘ಹೃದಯವನ್ನು ಮನುಷ್ಯ ದೇಹದಿಂದ ಬೇರ್ಪಡಿಸಿದ ನಾಲ್ಕು ಗಂಟೆಗಳ ಒಳಗಾಗಿ ಆ ಹೃದಯವನ್ನು ಮತ್ತೊಬ್ಬರಿಗೆ ಜೋಡಿಸಬೇಕಾಗುತ್ತದೆ. ಹೃದಯ ತೆಗೆದ ಕೂಡಲೇ ಅದನ್ನು ಐಸ್‌ಬಾಕ್ಸ್‌ನಲ್ಲಿ ಇರಿಸಿ, ಆ ವ್ಯಕ್ತಿ ಇರುವ ಸ್ಥಳಕ್ಕೆ ಆಂಬುಲೆನ್ಸ್ ಅಥವಾ ಏರ್ ಆಂಬುಲೆನ್ಸ್ ಮೂಲಕ ತಕ್ಷಣ ರವಾನಿಸಬೇಕಾಗುತ್ತದೆ. ಈ ಪ್ರಯಾಣದ ಅವಧಿಯಲ್ಲಿ ಹೃದಯ ಕಸಿ ಮಾಡಲು ಬೇಕಾದ ಸಂಪೂರ್ಣ ಶಸ್ತ್ರಚಿಕಿತ್ಸೆಗೆ ಸಿದ್ಧತೆ ನಡೆಸಲಾಗುತ್ತದೆ’ ಎಂದು ಹೇಳುತ್ತಾರೆ, ಅಂಗಾಂಗ ಜೋಡಣೆಯಲ್ಲಿ ನುರಿತರಾದ ಬೆಂಗಳೂರಿನ ಫೋರ್ಟಿಸ್ ಆಸ್ಪತ್ರೆಯ ಹೃದಯ ತಜ್ಞ ಡಾ. ಆರ್. ಕೇಶವ್.

ಹೃದಯ ದೊರೆತ ಮಾತ್ರಕ್ಕೆ ಅದರ ಕಸಿ ಸಾಧ್ಯವಿಲ್ಲ. ‘ಹೃದಯ ಜೋಡಣೆ ಮಾಡುವ ರೋಗಿಯ ರಕ್ತದ ಗುಂಪು ಹೊಂದಾಣಿಕೆಯಾಗಬೇಕಾದ ಅಗತ್ಯವೂ ಇದೆ. ದಾನಿ ಹಾಗೂ ರೋಗಿ ಇಬ್ಬರ ರಕ್ತದ ಗುಂಪು ಒಂದೇ ಇದ್ದರೆ ಒಳ್ಳೆಯದು. ಕೆಲವು ಪ್ರಕರಣಗಳಲ್ಲಿ ಕೆಲವೊಂದು ರಕ್ತದ ಗುಂಪು ಎಲ್ಲಾ ರಕ್ತದ ಗುಂಪಿಗೂ ಹೊಂದಾಣಿಕೆಯಾಗುತ್ತದೆ. ಆ ರೀತಿಯ ಹೊಂದಾಣಿಕೆಯನ್ನು ನೋಡಿಕೊಂಡು ಹೃದಯದ ಕಸಿ ಮಾಡುತ್ತೇವೆ’ ಎನ್ನುತ್ತಾರವರು.

‘ಹೃದಯದ ಕಸಿಯಾದ ಬಳಿಕ ಆ ವ್ಯಕ್ತಿಯನ್ನು ಹೆಚ್ಚು ಕಾಳಜಿಯಿಂದ ನೋಡಿಕೊಳ್ಳಬೇಕಾಗುತ್ತದೆ. ರೋಗಿ ಸಂಪೂರ್ಣ ಚೇತರಿಸಿಕೊಂಡ ಬಳಿಕ ಮನೆಗೆ ಕಳಿಸಲಾಗುತ್ತದೆ. ನಂತರದ ದಿನಗಳಲ್ಲೂ ಆಗಾಗ ಹೃದಯ ಪರೀಕ್ಷೆ ಮಾಡಿಸಿಕೊಳ್ಳಬೇಕಾಗುತ್ತದೆ. ಇಲ್ಲವಾದರೆ ಹೃದಯಕ್ಕೆ ಸೋಂಕು ತಗಲುವ ಸಾಧ್ಯತೆ ಇದೆ’ ಎಂದು, ಹೃದಯಕಸಿಯ ಸಂಕೀರ್ಣತೆಯ ಬಗ್ಗೆ ಹೇಳುತ್ತಾರೆ.

‘ಹೃದಯ ಕಸಿ ಮಾಡಿಸಿಕೊಂಡ ಮಕ್ಕಳು ವಿದ್ಯಾಭ್ಯಾಸವನ್ನೂ ಮುಂದುವರಿಸಬಹುದು ಅಲ್ಲದೆ ಇವರ ಮುಂದಿನ ಜೀವನಕ್ಕೆ ಏನೂ ತೊಂದರೆಯಾಗದು. ಆದರೆ ಹೃದಯ ಕಸಿ ಮಾಡಿಸಿಕೊಂಡ ರೋಗಿ ನಿತ್ಯವೂ ರೋಗನಿರೋಧಕ ಔಷಧಿ ತೆಗೆದುಕೊಳ್ಳಬೇಕಾಗುತ್ತದೆ. ಹತ್ತು ವರ್ಷಗಳ ಹಿಂದೆ ಹೃದಯಕಸಿ ಮಾಡಿಸಿಕೊಂಡ ಶಾಲಾ ವಿದ್ಯಾರ್ಥಿ ಈಗ ಓದು ಮುಗಿಸಿದ್ದು ವೃತ್ತಿಜೀವನಕ್ಕೆ ಕಾಲಿಟ್ಟಿರುವ ಉದಾಹರಣೆಯೂ ಇದೆ. ಹೀಗಾಗಿ ಹೃದಯ ಕಸಿ ಮಾಡಿಸಿಕೊಂಡವರು ಆತಂಕ ಪಡದೆ ಆತ್ಮಸ್ಥೈರ್ಯ ಬೆಳೆಸಿಕೊಂಡರೆ ಸುಗಮ ಜೀವನ ನಡೆಸಬಹುದು’ ಎಂಬುದು ಈ ವೈದ್ಯರ ಸಲಹೆ.

ಹೃದಯ ಕಸಿಯ ಬಳಿಕ ರೋಗಿ ಮನೆಯಲ್ಲಿ ಹೆಚ್ಚಿನ ಕಾಳಜಿ ವಹಿಸಬೇಕಾಗುತ್ತದೆ. ಹೃದಯ ಕಸಿ ಮಾಡಿಸಿಕೊಂಡ ವೃದ್ಧರಿಗಿಂತಲೂ ಯುವಕರು ಬದುಕಿ ಉಳಿಯುವ ಸಾಧ್ಯತೆ ಹೆಚ್ಚು. ಮಕ್ಕಳು ಬೇಗನೆ ಚೇತರಿಸಿಕೊಳ್ಳುವರು ಅಲ್ಲದೆ ದೀರ್ಘಕಾಲ ಬದುಕಬಹುದು. ■

